ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

## OFFICE OF THE DEPUTY COMMISSIONER, SHIVAMOGGA DISTRICT, SHIVAMOGGA.

ದೂರವಾಣಿ/PHONE: - 08182-271101/221010/222082; ಫ್ಯಾಕ್ಸ್/FAX: - 277082; ಇ-ಮೇಲ್ /E-MAIL: - deo.shimoga@gmail.com

ನಂ: ಸಿಬ್ಬಂದಿ (1) ಎ ಪಿ ಪಿ ಸಿ ಅರ್ 31/2019-20. ದಿನಾಂಕಃ 03.01.2022.

**: ಅಧಿಸೂಚನೆ :**

ವಿಷಯ: ಶಿವಮೊಗ್ಗ ಜಿಲ್ಲೆಯಲ್ಲಿ 2019-20ನೇ ಸಾಲಿನಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಚುರ ಪಡಿಸುವ ಕುರಿತು.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆಃ ಸಿ ಅ ಸು ಇ 08 ಸಹಿಮ 95 ದಿನಾಂಕಃ20.06.1995.
2. ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆಃ ದಿನಾಂಕಃ 16.01.2020.
3. ಸರ್ಕಾರದ ಸುತ್ತೋಲೆ ಸಂಖ್ಯೆಃ ಆ ಇ 03 ಬಿ ಇ ಎಂ 2020. ದಿನಾಂಕಃ 06.07.2020.
4. ಸರ್ಕಾರದ ಪತ್ರ ಸಂಖ್ಯೆಃ ಕಂ ಇ 192 ಬಿ ಎಸ್ ಸಿ 2021, ದಿನಾಂಕಃ 25.10.2021.
5. ಈ ಕಛೇರಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಸಮಸಂಖ್ಯೆಃ ದಿನಾಂಕಃ 18.12.2021.

*****

ಶಿವಮೊಗ್ಗ ಜಿಲ್ಲೆಯಲ್ಲಿ ಖಾಲಿ ಇರುವ 69 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು The Karnataka General Services (Revenue Subordinate Branch) (Cadre and Recruitment) Rules 2008 ಮತ್ತು ತಿದ್ದುಪಡಿ ನಿಯಮಗಳು 2009ರನ್ವಯ ಹಾಗೂ ಉಲ್ಲೇಖದಲ್ಲಿನ ಸರ್ಕಾರಿ ಆದೇಶಗಳಲ್ಲಿ ನೀಡಿರುವ ಸೂಚನೆಗಳಂತೆ, ಉಲ್ಲೇಖ (2)ರ ಅಧಿಸೂಚನೆಯಲ್ಲಿ Online ಮೂಲಕ ಅರ್ಜಿಗಳನ್ನು ಅಹ್ವಾನಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. Online ಮೂಲಕ ಅರ್ಜಿ ಸಲ್ಲಿಸಲು ಕಡೆಯ ದಿನಾಂಕದೊಳಗೆ ಸ್ವೀಕೃತವಾದ ಒಟ್ಟು ಅರ್ಜಿಗಳಲ್ಲಿ 1:10ರ ಅನುಪಾತದ ಪ್ರಮಾಣದಲ್ಲಿ ಪರಿಶೀಲನಾ ಪಟ್ಟಿಯನ್ನು ತಯಾರಿಸಿ ಪ್ರಕಟಿಸಲಾಗಿರುತ್ತದೆ.

ಸದರಿ ಪರಿಶೀಲನಾ ಪಟ್ಟಿಯಂತೆ ದಿನಾಂಕಃ 20.11.2021 ರೊಳಗೆ ಮೂಲ ದಾಖಲಾತಿಗಳನ್ನು ಹಾಜರುಪಡಿಸಲು ಸೂಚಿಸಿದ್ದು, ಅದರಂತೆ ಅಭ್ಯರ್ಥಿಗಳು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದೆ. ದಾಖಲೆ ಗಳ ಪರಿಶೀಲನೆಯಿಂದ ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ಉಲ್ಲೇಖ(5)ರ ದಿನಾಂಕಃ18.12.2021ರ ಅಧಿಸೂಚನೆಯಲ್ಲಿ 69 ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಒಟ್ಟು 05 ಅಭ್ಯರ್ಥಿಗಳ 03 ಆಕ್ಷೇಪಣಾ ಅರ್ಜಿಗಳು ಸ್ವೀಕೃತವಾಗಿರುತ್ತದೆ. ಆಕ್ಷೇಪಣಾ ಅರ್ಜಿಗಳನ್ನು ಪರಿಶೀಲಿಸಲಾಗಿದ್ದು, ರೆಫೆರನ್ಸ್ ಸಂಖ್ಯೆಃ 261482 ಧನಸಿಂಗ್ ನಾಯ್ಕ್, ರೆಫೆರನ್ಸ್ ಸಂಖ್ಯೆಃ 262384 ಶ್ರೀನಿವಾಸ ಚೌಡಪ್ಪ ಮಡಿವಾಳ, ರೆಫೆರನ್ಸ್ ಸಂಖ್ಯೆಃ 259109 ಬಸವರಾಜ ಮಹದೇವಪ್ಪ ಕುರುಬರ,

ಇವರುಗಳ ಮೂಲ ಅಂಕಪಟ್ಟಿಯ ನೈಜತೆ, ನಿರಪೇಕ್ಷಣಾ ಪತ್ರ, ಸೇವೆಯಿಂದ ನಿವೃತ್ತಿ ಬಗ್ಗೆ ದೃಢೀಕರಣ ವಿಷಯವಾಗಿ ಆಕ್ಷೇಪಣೆ ಹಾಗೂ ರೆಫೆರೆನ್ಸ್ ಸಂಖ್ಯೆ: 243184 ರವಿ ಅರಳಿಕಟ್ಟೆ ಇವರು ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಸೇವೆಯಲ್ಲಿರುವುದಾಗಿ ಹಾಗೂ ರೆಫೆರೆನ್ಸ್ ಸಂಖ್ಯೆ: 241006 ರಾಮು ಎಸ್, ಇವರು ಹಾಲಿ ಹಾಸನ ಜಿಲ್ಲೆಯಲ್ಲಿ ಕಾಯ್ದಿರಿಸಿದ ಪಟ್ಟಿಯಲ್ಲಿ ಇರುವುದಾಗಿ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಮೂಲ ಅಂಕಪಟ್ಟಿ ನೈಜತೆ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅಥವಾ ಸಕ್ಷಮ ಪ್ರಾಧಿಕಾರದಿಂದ ಪರಿಶೀಲನಾ ವರದಿಯನ್ನು ಪಡೆದ ನಂತರವೇ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡುವ ಕುರಿತು ಕ್ರಮವಹಿಸಲಾಗುವುದು ಹಾಗೂ ನಿರಾಕ್ಷೇಪಣ ಪತ್ರ ಮತ್ತು ಸೈನಿಕ ಸೇವೆಯಿಂದ ನಿವೃತ್ತಿಯ ಬಗ್ಗೆ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ, ಬೆಂಗಳೂರು ಇವರಿಂದ ಸ್ಪಷ್ಟೀಕರಣವನ್ನು ಪಡೆದ ನಂತರ ಕ್ರಮವಹಿಸಲಾಗುವುದು ಹಾಗೂ ಬೇರೆ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದರ ಕುರಿತು ಈ ಸಮಯದಲ್ಲಿ ಪರಿಶೀಲಿಸಲು ಅವಕಾಶವಿರುವುದಿಲ್ಲ. ಸದರಿಯವರು ಮೂಲ ದಾಖಲಾತಿ ಸಲ್ಲಿಸಿದ್ದಲ್ಲಿ ಮಾತ್ರ ಅವರಿಗೆ ಆದೇಶವನ್ನು ನೀಡಲು ಕ್ರಮವಹಿಸಲಾಗುವುದು ಎಂದು ಅರ್ಜಿಯ ಕುರಿತು ಅರ್ಜಿದಾರರಿಗೆ ಹಿಂಬರಹ ನೀಡುವ ಕುರಿತು ಕ್ರಮವಹಿಸಲಾಗಿರುತ್ತದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ರೆಫೆರೆನ್ಸ್ ಸಂಖ್ಯೆ: 236967 ಲಿಂಗರಾಜು ಇವರು ಪರಿಶಿಷ್ಟ ಜಾತಿ ಮೀಸಲಾತಿಯಡಿಯಲ್ಲಿ ಆಯ್ಕೆಯಾಗಿದ್ದು, ಸದರಿಯವರು ಸಲ್ಲಿಸಿರುವ ಮೂಲ ದಾಖಲಾತಿಗಳನ್ನು ಪರಿಶೀಲಿಸಿದ್ದು, ದ್ವಿತೀಯ ಪಿ.ಯು.ಸಿ ಯಲ್ಲಿ ಪಾಸಾದ ಕುರಿತು ಸಲ್ಲಿಸಿರುವ ಅಂಕಪಟ್ಟಿಯು ಮುಕ್ತ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ ಅಂಕಪಟ್ಟಿಯನ್ನು ಸಲ್ಲಿಸಿರುವುದರಿಂದ ಸದರಿಯವರ ಅರ್ಜಿಯನ್ನು ರದ್ದುಪಡಿಸಿ, ಸದರಿ ಅಭ್ಯರ್ಥಿಗಳ ಬದಲಾಗಿ ಕಾಯ್ದಿರಿಸಿದ ಅಭ್ಯರ್ಥಿಯಾದ ರೆಫೆರೆನ್ಸ್ ಸಂಖ್ಯೆ:238033 ರಲ್ಲಿರುವ ಶ್ರೀ ಸೋಮೇಶ್ ಇವರಿಗೆ ಅವಕಾಶ ನೀಡುವ ಕುರಿತು ಕ್ರಮವಹಿಸಲಾಗಿರುತ್ತದೆ.

ಅದರಂತೆ 69 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಈ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿರುತ್ತದೆ.

ಅಂತಿಮ ಆಯ್ಕೆಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳು ದಿನಾಂಕ: 19.01.2022 ರ ಸಂಜೆ 5.00 ಗಂಟೆ ಯೊಳಗಾಗಿ ಅರ್ಜಿಯೊಂದಿಗೆ ಕೋರಿರುವ ಮೀಸಲಾತಿ / ಪಿ.ಯು.ಸಿ ಅಂಕಪಟ್ಟಿಯ ಎಲ್ಲಾ ಮೂಲ ದಾಖಲಾತಿಗಳನ್ನು ಖುದ್ದಾಗಿ "ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಛೇರಿಯ ಆಡಳಿತ ಶಾಖೆ, ಕೊಠಡಿ ಸಂಖ್ಯೆ: 103, ನೆಲ ಮಹಡಿ" ಇಲ್ಲಿಗೆ ಸಲ್ಲಿಸಲು ಸೂಚಿಸಿದೆ. ಮೂಲ ದಾಖಲೆಗಳನ್ನು ಈ ಕಛೇರಿಗೆ ನಿಗಧಿತ ದಿನಾಂಕದೊಳಗೆ ಹಾಜರು ಪಡಿಸದ ಅಭ್ಯರ್ಥಿಯ ಆಯ್ಕೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಲಾಗುವುದು.

ನೇಮಕಾತಿಯು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟಿರುತ್ತದೆ.

| | |
|---|---|
| 1 | ಅಭ್ಯರ್ಥಿಯು ಸಲ್ಲಿಸುವ ಮೂಲ ದಾಖಲಾತಿಗಳಲ್ಲಿ ತಪ್ಪು ಮಾಹಿತಿ ಅಥವಾ ಸುಳ್ಳು ದಾಖಲೆ ಎಂದು ಕಂಡು ಬಂದಲ್ಲಿ ಯಾವುದೇ ಸೂಚನೆ ನೀಡದೇ ಅಂತಹವರ ಆಯ್ಕೆಯನ್ನು ರದ್ದು ಪಡಿಸಲಾಗುವುದು. |
| 2 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2-ಎ, 2-ಬಿ, 3-ಎ, 3-ಬಿ, ಗ್ರಾಮೀಣ, ಯೋಜನಾ ನಿರಾಶ್ರಿತ, ಕನ್ನಡ ಮಾಧ್ಯಮ, ಮಾಜಿ ಸೈನಿಕ ಮತ್ತು ಅಂಗವಿಲಕ ಮೀಸಲಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯು ಸದರಿ ಪ್ರಮಾಣ ಪತ್ರಗಳ ಬಗ್ಗೆ ಸಕ್ಷಮ ಪ್ರಾಧೀಕಾರಗಳಿಂದ ಸಿಂಧುತ್ವ ಪರಿಶೀಲನೆಗೆ ಒಳಪಟ್ಟಿರುತ್ತದೆ. |

| | |
|---|---|
| 3 | ಆಯ್ಕೆಯಾದ ಅಭ್ಯರ್ಥಿಗಳ ದ್ವಿತೀಯ ಪಿ.ಯು.ಸಿ ಅಂಕಪಟ್ಟಿ ಅಥವಾ CBSE ಅಥವಾ ICSE ನಡೆಸುವ 12ನೇ ತರಗತಿ ಪರೀಕ್ಷೆಯ ಅಂಕಪಟ್ಟಿ ಸಕ್ಷಮ ಪ್ರಾಧೀಕಾರಗಳ ಪರಿಶೀಲನೆಗೆ ಒಳಪಟ್ಟಿರುತ್ತದೆ. |
| 4 | ಅಭ್ಯರ್ಥಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇರುವುದಿಲ್ಲವೆಂದು ಹಾಗೂ ಒಳ್ಳೆಯ ನಡತೆ ಮತ್ತು ಪೂರ್ವ ಚರಿತ್ರೆ ಹೊಂದಿರುವ ಬಗ್ಗೆ ಪೊಲೀಸ್ ಇಲಾಖೆಯಿಂದ ದೃಢೀಕರಣ ಪತ್ರವನ್ನು ಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ. |
| 5 | ಸದರಿ ನೇಮಕಾತಿ ಆದೇಶವು ಸರ್ಕಾರವು ಮುಂದೆ ನೀಡುವ ಸೂಚನೆಯ ಷರತ್ತಿಗೆ ಒಳಪಟ್ಟಿರುತ್ತದೆ. |

ವಿಶೇಷ ಸೂಚನೆಃ ನೇಮಕಾತಿಯು Merit Cum Roster ಆಧಾರದ ಮೇಲೆ ಹಾಗೂ ಪೂರ್ಣವಾಗಿ ಪಾರದರ್ಶಕ ರೀತಿಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುವ ಕಾರಣ ಯಾವುದೇ ಅಭ್ಯರ್ಥಿಯು ಹಣ / ಶಿಫಾರಸ್ಸು/ ಮಧ್ಯವರ್ತಿಗಳಿಂದ ಮೋಸ ಹೋದಲ್ಲಿ ಸಂಬಂಧ ಪಟ್ಟವರೆ ಜವಾಬ್ದಾರರಾಗುವರು.

L. B. [signature]

ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು,
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಸಮಿತಿ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

ಪ್ರತಿಯನ್ನುಃ

1. ಸಂಕಲನಕಾರರು, ಸರ್ಕಾರಿ ಹೊರವಲಯ ಮುದ್ರಣಾಲಯ, ಆರ್.ವಿ ಕಾಲೇಜ್, 8ನೇ ಮೈನ್, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು ರವರಿಗೆ ಕಳುಹಿಸುತ್ತಾ ಈ ಅಧಿಸೂಚನೆಯನ್ನು ಇ –ರಾಜ್ಯ ಪತ್ರದದಲ್ಲಿ ಪ್ರಕಟಿಸಲು ಹಾಗೂ ಪ್ರತಿಯನ್ನು ಈ ಕಛೇರಿಗೆ ಒದಗಿಸಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತಾ ತಮ್ಮ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
6. ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ,
7. ಉಪವಿಭಾಗಾಧಿಕಾರಿಗಳು, ಶಿವಮೊಗ್ಗ-ಸಾಗರ ಉಪವಿಭಾಗ ರವರಿಗೆ ಕಳುಹಿಸುತ್ತಾ ತಮ್ಮ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
8. ಜಿಲ್ಲೆಯ ಎಲ್ಲಾ ತಹಶೀಲ್ದಾರ್ ರವರಿಗೆ ಕಳುಹಿಸುತ್ತಾ ತಮ್ಮ ಕಾರ್ಯಾಲಯದಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
9. ಸಂಬಂಧಿಸಿದ ಎಲ್ಲಾ ಅಭ್ಯರ್ಥಿಗಳಿಗೆ.
10. ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.